ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಶೈಶಾ/ಸ.ನಿ.ಲೆ.ಸ:04/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012
ದಿನಾಂಕ: 09.01.2017

## ಸುತ್ತೋಲೆ

**ವಿಷಯ:** ಕಾಲೇಜುಗಳ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ
**ಉಲ್ಲೇಖ:** 1) ಈ ಕಛೇರಿ ಪತ್ರ ಸಂ: ಪಪೂಶಿ/ಶೈಶಾ/ಸ.ನಿ.ಲೆ.ಸ:01/2016-17 ದಿನಾಂಕ: 04.11.2016
2) KIPA ಸಂಸ್ಥೆಯ ಕಾರ್ಯದರ್ಶಿಗಳ ಪತ್ರ

***

KIPA ಸಂಸ್ಥೆಗೆ ಉಲ್ಲೇಖ 1 ರಲ್ಲಿ 02 ಸರ್ಕಾರಿ ಪ.ಪೂ. ಕಾಲೇಜುಗಳಲ್ಲಿ ಜಮಾವಣೆಯಾದ ಸಂಚಿತ ನಿಧಿಯ ಲೆಕ್ಕಪತ್ರ ತಪಾಸಣೆ ಮಾಡಲು ಸೂಚಿಸಲಾಗಿತ್ತು. ಅದರನ್ವಯ ಮಾದರಿಯಾಗಿ 02 ಸ.ಪ.ಪೂ.ಕಾಲೇಜುಗಳಲ್ಲಿ ಕಳೆದ 05 ವರ್ಷಗಳ ಲೆಕ್ಕಪತ್ರ ತಪಾಸಣೆ ಮಾಡಿ ವರದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಕಾಲೇಜುಗಳಲ್ಲಿ ಲೆಕ್ಕಪತ್ರ ತಪಾಸಣೆ ಮಾಡುವಾಗ ಹಲವಾರು ನ್ಯೂನತೆಗಳು ಕಂಡು ಬಂದಿದ್ದು, (ಕೆಳಗೆ ಪಟ್ಟಿ ಮಾಡಲಾಗಿದೆ) ಈ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ನಡೆಸುವ ಲೆಕ್ಕಪತ್ರ ತಪಾಸಣೆಗೆ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು ಸಿದ್ಧರಾಗುವುದು

1) ರಶೀದಿ ಪುಸ್ತಕಗಳ ದಾಸ್ತಾನುವಹಿಗಳ ಅಸಮರ್ಪಕ ನಿರ್ವಹಣೆ,
2) ಸರ್ಕಾರೇತರ ನಗದು ಪುಸ್ತಕದ ಅಸಮರ್ಪಕ ನಿರ್ವಹಣೆ,
3) ಸರ್ಕಾರಿ ಲೆಕ್ಕ ಮತ್ತು ಸರ್ಕಾರೇತರ ಲೆಕ್ಕವನ್ನು ಮಿಶ್ರಣ ಮಾಡಿರುವುದು,
4) ವೆಚ್ಚದ ಮಿತಿಗಿಂತ ಹೆಚ್ಚಿಗೆ ಭರಿಸುವುದಕ್ಕೆ ಅನುಮೋದನೆ ಪಡೆಯದಿರುವುದು.
5) ವಿದ್ಯಾರ್ಥಿನಿಯರ ಶುಲ್ಕ ಮರುಭರಣ ಪೂರ್ಣ ಪ್ರಮಾಣದಲ್ಲಿ ಆಗದೇ ಇರುವುದು,
6) ಮಾಡಿದ ವೆಚ್ಚಗಳಿಗೆ ಓಚರ್ಸ್ ಲಭ್ಯವಿಲ್ಲದಿರುವುದು.

ಈ ಮೇಲ್ಕಾಣಿಸಿದ ನ್ಯೂನತೆಗಳು ಇನ್ನಿತರ ಸರ್ಕಾರಿ ಪ.ಪೂ.ಕಾಲೇಜುಗಳಲ್ಲಿ ಇರಬಹುದಾಗಿದ್ದು, ಪ್ರಯುಕ್ತ ಸರ್ಕಾರಿ ಪ.ಪೂ.ಕಾಲೇಜುಗಳಲ್ಲಿ ಲೆಕ್ಕಪತ್ರವನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸರ್ಕಾರೇತರ ನಿಧಿಯ ಲೆಕ್ಕದ ಪರಿಪೂರ್ಣ ನಿರ್ವಹಣೆಗೆ ಈ ಕೆಳಕಂಡ ಕ್ರಮ ವಹಿಸಲು ಸೂಚಿಸಿದೆ

1) ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ವಹಿಗಳ ನಿಗದೀಕರಣಗೊಳಿಸುವಿಕೆ (ನಗದು ಪುಸ್ತಕ, ದಿನವಹಿ ವಸೂಲಿ ಪುಸ್ತಕ, ರಶೀದಿ ದಾಸ್ತಾನು ವಹಿ, ಬಟವಾಡೆ ಖಾತೆಗಳ ಪುಸ್ತಕ ದಾಸ್ತಾನು ವಹಿ, ಓಚರಗಳು, ಜಮೆ ಪುಸ್ತಕ, ಧನಾದೇಶ ದಾಸ್ತಾನು ವಹಿ ಇತ್ಯಾದಿ)

2) ಇಲಾಖೆ/ ಸರ್ಕಾರದ ಮಾರ್ಗಸೂಚಿಯಂತೆ ವಹಿಗಳನ್ನು ಸಮರ್ಪಕವಾಗಿ ದಾಖಲಿಸುವುದು

3) ಹಣಕಾಸಿನ ವಹಿವಾಟಿನ ಕುರಿತು ಸಮರ್ಪಕ ನಿರ್ವಹಣೆ

4) ನಿಯಮಿತವಾಗಿ ಲೆಕ್ಕಪತ್ರಗಳನ್ನು ತಪ್ಪದೇ ನಿರ್ವಹಿಸುವುದು

5) ಸುತ್ತೋಲೆಗಳು ಆದೇಶಗಳಂತೆ ಸರ್ಕಾರಿ ಪ.ಪೂ.ಕಾಲೇಜುಗಳಲ್ಲಿ ಸಂಗ್ರಹ ಮಾಡಲಾದ ಸರ್ಕಾರಿ ಶುಲ್ಕಗಳ ಮತ್ತು ಇತರೇ ಬಾಬ್ತುಗಳನ್ನು ಪಡೆದ ಕುರಿತು ದಾಖಲೆಗಳ ನಿರ್ವಹಣೆ

6) ವಿದ್ಯಾರ್ಥಿಗಳ ದಾಖಲಾತಿ ವಹಿ

7) ಕಾಲಕಾಲಕ್ಕೆ ಪರಿಷ್ಕೃತಗೊಂಡ ಶುಲ್ಕದ ಬಗ್ಗೆ ಆದೇಶಗಳು

8) ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ವಹಿಗಳು

9) ಇಲಾಖೆ/ಸರ್ಕಾರ ಸೂಚಿಸಿರುವ ಎಲ್ಲಾ ದಾಖಲೆ/ವಹಿಗಳ ಸಮರ್ಪಕ ನಿರ್ವಹಣೆ

ಮೇಲೆ ಸೂಚಿಸಿರುವಂತೆ ಎಲ್ಲಾ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ದಿನಾಂಕ **15.02.2017** ರ ಒಳಗಾಗಿ ನಿರ್ವಹಿಸುವುದು. ಈ ಕುರಿತಂತೆ ಜಿಲ್ಲಾ ಉಪನಿರ್ದೇಶಕರಿಂದ ತಮ್ಮ ಕಾಲೇಜು ಭೇಟಿಯಲ್ಲಿ ಲೆಕ್ಕಪತ್ರಗಳ ಸಮರ್ಪಕವಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

9/1/17

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಗೆ

ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ – ಮುಂದಿನ ಸೂಕ್ತಕ್ರಮಕ್ಕಾಗಿ

<u>ಪ್ರತಿಯನ್ನು</u>

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು–ಮಾಹಿತಿಗಾಗಿ ಸಲ್ಲಿಸಿದೆ
2. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ. –ಮಾಹಿತಿ ಹಾಗೂ ಮುಂದಿನ ಸೂಕ್ತಕ್ರಮಕ್ಕಾಗಿ
3. ಅಧ್ಯಕ್ಷರು– ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್ಸ್ ಬೆಂಗಳೂರು– ಅವಗಾಹನೆಗಾಗಿ
4. ಇ ಗವರ್ನೆನ್ಸ್ ಶಾಖೆಗೆ –ಅಂತರ್ಜಾಲದಲ್ಲಿ ಅಳವಡಿಸಲು
5. ಕಛೇರಿ ಪ್ರತಿ